# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 52

ಸ್ವಾಮಿ ನಿತ್ಯಸ್ಥಾನಂದ

## ಸಾಧು ಭಗವಚ್ಚಿಂತನೆ ಮಾಡಲೇಬೇಕು

**ಶ್ರೀರಾಮಕೃಷ್ಣರು:** ‘‘ಸಂಸಾರವನ್ನು ತ್ಯಜಿಸಿದ ಸಾಧು ಭಗವನ್ನಾಮವನ್ನು ಜಪಿಸೇ ಜಪಿಸುತ್ತಾನೆ. ಆತ ಹಾಗೆ ಮಾಡಬೇಕಾದ್ದೆ. ಆತನಿಗೆ ಬೇರೇನೂ ಕೆಲಸವೇ ಇಲ್ಲ. ಆತ ಭಗವಚ್ಚಿಂತನೆ ಮಾಡುತ್ತಿದ್ದರೆ ಅದು ಆಶ್ಚರ್ಯವಾದ ವಿಷಯವೇನಲ್ಲ. ಆತ ಭಗವಚ್ಚಿಂತನೆ ಮಾಡದೇ ಇದ್ದ ಎಂದರೆ, ಭಗವನ್ನಾಮೋಚ್ಚಾರಣೆ ಮಾಡದೇ ಇದ್ದ ಎಂದರೆ, ಆಗ ಜನ ಆತನನ್ನು ನಿಂದಿಸುತ್ತಾರೆ.’’

ಸಾಧುವು ಸಾಧನೆಯನ್ನು ಕಡೆಗಣಿಸಿದರೆ ‘ಸಾಧು ಅಹಂ’ ಬಂದುಬಿಡುತ್ತದೆ. ತಾನು ಇತರರಿಗಿಂತ ಶ್ರೇಷ್ಠ, ಎಲ್ಲರೂ ನನ್ನನ್ನು ಗೌರವಿಸಬೇಕು ಎಂಬ ಅಹಂ ಭಾವ ಜಾಗೃತವಾಗುತ್ತದೆ, ಇತರ ಸಾಧುಗಳೊಡನೆ ಅಹಂಸಂಘರ್ಷ (ego-clash) ಉಂಟಾಗುತ್ತದೆ. ಮತ್ತೆ ಅನೇಕ ಜನ ಭಕ್ತರು ಸಾಧುವನ್ನು ಗೌರವಿಸುವಾಗ, ತಾನೊಬ್ಬ ದೊಡ್ಡ ಸಾಧು ಎಂದೆನಿಸತೊಡಗುತ್ತದೆ. ತಾನು ನಿಜವಾಗಿಯೂ ಇಷ್ಟೊಂದು ಗೌರವಕ್ಕೆ ಅರ್ಹನೇ ಎಂಬ ಆತ್ಮವಿಮರ್ಶೆ ಕಣ್ಮರೆಯಾಗುತ್ತದೆ. ಆ ವಿಚಾರ ಮನಸ್ಸಿಗೆ ಬಂದರೂ ಗೌರವದ ಅಮಲು ಅದನ್ನು ಅದುಮಿಡುತ್ತದೆ. ಇತರರ ಅಭಿಪ್ರಾಯದ ಮೇಲೆ ನಾವೆಂಥವರು ಎಂಬುದನ್ನು ನಿರ್ಣಯಿಸುವಷ್ಟು ನಾವು ಪರಾವಲಂಬಿಗಳಾಗಬಾರದು. ಅಲೈನ್ ಡಿ ಬಾಟಂ ಎಂಬುವವರು ಹೇಳುತ್ತಾರೆ: ‘‘Our sense of identity is held hostage to the opinions of others.’’ (ನಮ್ಮ ಬಗೆಗಿನ ನಮ್ಮ ಕಲ್ಪನೆಯು ಇತರರ ಅಭಿಪ್ರಾಯದ ತೆಕ್ಕೆಯೊಳಗಿದೆ.) ಇತರರ ಅಭಿಪ್ರಾಯವನ್ನು ಅವಲಂಬಿಸದೆ, ನಮ್ಮನ್ನು ನಾವೇ ವಿಮರ್ಶಿಸಿಕೊಳ್ಳುತ್ತ ನಮ್ಮ ಬಗ್ಗೆ ನಮಗೆ ಒಂದು ವಾಸ್ತವ ಅಭಿಪ್ರಾಯವನ್ನು ಹೊಂದಿರಬೇಕು. ನಾನೆಂಥವನು ಎಂಬುದು ನನಗೇ ಗೊತ್ತಿರಬೇಕು, ಅದನ್ನು ಇನ್ನೊಬ್ಬರು ಹೇಳಬೇಕಾಗಿಲ್ಲ. ಕೆಲವರು, ‘ನನ್ನ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಾನು ಒಳ್ಳೆಯವನೋ, ಕೆಟ್ಟವನೋ?’ ಈ ರೀತಿ ಇತರರನ್ನು ಕೇಳುವುದುಂಟು. ಇದು ಅಂತರಂಗದ ಕೀಳರಿಮೆಯನ್ನು, ತನ್ನ ಸ್ವಭಾವದ ಬಗ್ಗೆಯೇ ಇರುವ ಸಂದೇಹವನ್ನು ಸೂಚಿಸುತ್ತದೆ.

ಆದರೆ ಸ್ವವಿಮರ್ಶೆಯು ನಮ್ಮ ಆತ್ಮವಿಶ್ವಾಸವನ್ನು ಕುಂದಿಸಬಾರದು. ನಮ್ಮ ದೋಷಗಳನ್ನು ಕುರಿತು ಪರಿತಪಿಸುತ್ತಿದ್ದರೆ ಮನಸ್ಸು ದುರ್ಬಲವಾಗಿ ಆ ದೋಷ ನಿವಾರಣೆಯ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತೇವೆ. ಪಾಶ್ಚಾತ್ಯ ತತ್ತ್ವಜ್ಞಾನಿಗಳಾದ ಸ್ಪಿನೋಜಾ ಅವರು ಹೇಳುತ್ತಾರೆ:



‘‘ಆತ್ಮಸಾಕ್ಷಿಯ ಘಾಸಿ, ಪಶ್ಚಾತ್ತಾಪದ ಪರಿತಾಪ–ಇವು ನಮ್ಮನ್ನು ಸರಿಮಾರ್ಗಕ್ಕೆ ತರುತ್ತವೆ ಎಂದು ನಾವು ಭಾವಿಸಬಹುದು. ಆದ್ದರಿಂದ ಇಂತಹ ಭಾವಗಳು ಒಳ್ಳೆಯವು ಎಂದು ನಾವು ತೀರ್ಮಾನಿಸಬಹುದು. ಆದರೆ ನಾವು ವಿಷಯವನ್ನು ನಿಕಟತೆಯಿಂದ ಪರಿಶೀಲಿಸಿದಾಗ, ಅವು ಒಳ್ಳೆಯದಲ್ಲದಿರುವುದು ಮಾತ್ರವಲ್ಲದೆ ಅವು ಹಾನಿಕರ ಮತ್ತು ದುರ್ಭಾವಗಳು ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ವಿಚಾರ ಮತ್ತು ಸತ್ಯದ ಒಲವು – ಇವುಗಳೇ ನಮ್ಮನ್ನು ಉತ್ತಮಗೊಳಿಸುವುದು, ಚಿಂತೆ ಕೊರಗುಗಳಲ್ಲ. ಇವು ಕೇವಲ ನಮ್ಮ ದುಗುಡವನ್ನು ಹೆಚ್ಚಿಸುತ್ತವೆ.’’

## ಶ್ರೀರಾಮಕೃಷ್ಣರ ಸಮಾಧಿ ಸ್ಥಿತಿ

‘‘ಪರಮಹಂಸರು ರಾಖಾಲನನ್ನು ವಾತ್ಸಲ್ಯ ಭಾವದಿಂದ ನೋಡುತ್ತ ಪ್ರೇಮೋನ್ಮತ್ತರಾಗಿ, ‘ಗೋವಿಂದ, ಗೋವಿಂದ’ ಎಂದು ಸಂಬೋಧಿಸಿದರು. ಅವರು ರಾಖಾಲನಲ್ಲಿ ಸಾಕ್ಷಾತ್ ನಾರಾಯಣನನ್ನೇ ನೋಡಿದರೇನು? ರಾಖಾಲ ಕಾಮಕಾಂಚನತ್ಯಾಗಿ, ಶುದ್ಧಾತ್ಮ ಬಾಲಭಕ್ತ. ಪರಮಹಂಸರು ಭಗವದ್ ಭಕ್ತಿಯಿಂದ ಹಗಲಿರುಳೂ ಉನ್ಮತ್ತರು. ಬಾಲಕನಾದ ಶ್ರೀಕೃಷ್ಣನನ್ನು ನೋಡಿ ಯಶೋದೆಗೆ ಯಾವ ಭಾವ ಉಂಟಾಗುತ್ತಿತ್ತೋ, ಅದೇ ಭಾವ ರಾಖಾಲನನ್ನು ನೋಡಿ ಪರಮಹಂಸರಿಗೆ ಉಂಟಾಗಿರಬೇಕು. ಭಕ್ತರೆಲ್ಲರೂ ಆಶ್ಚರ್ಯಚಕಿತರಾಗಿ ಅವರನ್ನೇ ದೃಷ್ಟಿಸಿ ನೋಡುತ್ತಿದ್ದಾರೆ. ಪರಮಹಂಸರ ಶರೀರ ಚಿತ್ರದ ಬೊಂಬೆಯಂತೆ ಸ್ಥಿರವಾಗಿಬಿಟ್ಟಿದೆ. ಇಂದ್ರಿಯಸಮೂಹಗಳೆಲ್ಲ ತಮ್ಮ ತಮ್ಮ ಕೆಲಸಗಳಿಗೆ ರಾಜಿನಾಮೆ ಕೊಟ್ಟುಬಿಟ್ಟಿವೆ. ದೃಷ್ಟಿ ನಾಸಿಕಾಗ್ರದಲ್ಲಿ ಸ್ಥಿರವಾಗಿಬಿಟ್ಟಿದೆ, ಉಸಿರಾಡುವುದು ನಿಂತು ಹೋದಂತೆಯೇ

ಇದೆ. ಅವರ ಆತ್ಮಪಕ್ಷಿ ಬಹುಶಃ ಚಿದಾಕಾಶದಲ್ಲಿ ಸಂಚರಿಸು ತ್ತಿದೆ ಅಂತ ಕಾಣುತ್ತಿದೆ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೬೦)*

### ಶ್ರೀರಾಮಕೃಷ್ಣರ ನಮ್ರತೆ

''ಇನ್ನೊಂದು ದಿನ 'ನಿಮಾಯ್‌ಯ ಸಂನ್ಯಾಸ' ಎಂಬ ನಾಟಕ ನೋಡಲು ಕೇಶವಸೇನನ ಮನೆಗೆ ಹೋಗಿದ್ದೆ. ಕೇಶವ ಸೇನನ ಕೆಲವು ಮಂದಿ ಹೊಗಳುಭಟ್ಟ ಶಿಷ್ಯರು ಅಲ್ಲಿ ಸೇರಿ ಕೊಂಡುಬಿಟ್ಟು ಇಡೀ ನಾಟಕವನ್ನೇ ಕೆಡಿಸಿಬಿಟ್ಟರು. ಅವರಲ್ಲಿ ಒಬ್ಬ ಕೇಶವಸೇನನನ್ನು ಹೊಗಳಿದ: 'ನೀವು ಕಲಿಯುಗದ ಚೈತನ್ಯ ಮಹಾಪ್ರಭು'. ಆಗ ಕೇಶವ ನನ್ನನ್ನು ತೋರಿಸಿ ನಗುತ್ತ ನಗುತ್ತ ಹೇಳಿದ: 'ಹಾಗಾದರೆ ಅವರು?' ನಾನು ಹೇಳಿದೆ: 'ಏಕೆ, ನಾನು ನಿಮ್ಮ ದಾಸಾನುದಾಸ; ರೇಣುವಿನ ರೇಣು.' ಕೇಶವನಿಗೆ ಲೋಕಮಾನ್ಯವಾಗಬೇಕೆಂಬ ಇಚ್ಛೆ ಇತ್ತು.'' *(ಅಲ್ಲೇ, ಪು.೧೬೧)*

'Humanity is the ornament of the virtuous' (ನಮ್ರತೆಯೇ ನೀತಿವಂತರ ಆಭರಣ) ಎಂಬ ಆಂಗ್ಲ ಹೇಳಿಕೆ ಇದೆ. ಶ್ರೀರಾಮಕೃಷ್ಣರ ನಮ್ರತೆ ಅನನುಕರಣೀಯವಾದುದು. ಏಕೆಂದರೆ ಅವರು ಅಹಂಕಾರಶೂನ್ಯರಾಗಿದ್ದರು. ಶ್ರೀ ಚೈತನ್ಯರ ಶಿಕ್ಷಾಷ್ಟಕದಲ್ಲಿ ಹೇಳಿದೆ:

**ತೃಣಾದಪಿ ಸುನೀಚೇನ ತರೋರಿವ ಸಹಿಷ್ಣುನಾ ।**
**ಅಮಾನಿನಾ ಮಾನದೇನ ಕೀರ್ತಿನೀಯಃ ಸದಾ ಹರಿಃ ॥**

''ಹುಲ್ಲಿನಂತೆ ದೈನ್ಯನೂ, ಮರದಂತೆ ಸಹಿಷ್ಣುವೂ, ತಾನು ಮಾನಿಯಾಗದೆ ಇತರರಿಗಾಗಿ ಮಾನ್ಯತೆಯನ್ನು ನೀಡುತ್ತ ಸದಾ ಹರಿಸಂಕೀರ್ತನೆ ಮಾಡುತ್ತಿರಬೇಕು.''

ಅಹಂಕಾರವಿಲ್ಲದವರು, ಸರಳತೆಯಿಂದ ಕೂಡಿದವರು ಇತರರ ನಿಂದೆಯನ್ನು ಸಹಿಸಬಲ್ಲರು, ಉದ್ರಿಕ್ತರಾಗುವುದಿಲ್ಲ. ಈ ಕೆಳಗಿನ ಶ್ಲೋಕಗಳು ನಿಂದೆಗೊಳಗಾಗದವರಿಗೆ ಕಿವಿಮಾತಿನಂತಿವೆ:

**ಮನ್ನಿಂದಯಾ ಯದಿ ಜನಃ ಪರಿತೋಷಮೇತಿ**
**ನನ್ವಪ್ರಯತ್ನಸುಲಭೋಽಯಮನುಗ್ರಹೋ ಮೇ ।**
**ಶ್ರೇಯೋಽರ್ಥಿನೋ ಹಿ ಪುರುಷಾಃ ಪರಿತುಷ್ಟಿಹೇತೋಃ**
**ದುಃಖಾರ್ಜಿತಾನ್ಯಪಿ ಧನಾನಿ ಪರಿತ್ಯಜಂತಿ ॥**

**ಸತತಸುಲಭದೈನ್ಯೇ ನಿಃಸುಖೇ ಜೀವಲೋಕೇ**
**ಯದಿ ಮಮ ಪರಿವಾದಾತ್ ಪ್ರೀತಿಮಾಪ್ನೋತಿ ಕಶ್ಚಿತ್ ।**
**ಪರಿವದತು ಯಥೇಷ್ಟಂ ಮತ್ಸಮಕ್ಷಂ ತಿರೋ ವಾ**
**ಜಗತಿ ಹಿ ಬಹುದುಃಖೇ ದುರ್ಲಭಃ ಪ್ರೀತಿಯೋಗಃ ॥**

''ಶ್ರೇಯಸ್ಸನ್ನು ಬಯಸುವ ಪುರುಷರು ಇತರರ ಸಂತೋಷ ಕ್ಕಾಗಿ, ಕಷ್ಟದಿಂದ ಸಂಪಾದಿಸಿದ ಹಣವನ್ನು ಕೂಡ ತ್ಯಜಿಸುತ್ತಾರೆ. ಹಾಗಿರುವಾಗ ಜನರು ನನ್ನನ್ನು ನಿಂದಿಸುವುದರಿಂದ ಸಂತೋಷ ವನ್ನು ಹೊಂದುವಹಾಗಿದ್ದರೆ, ಇದು ನನಗೆ ಪ್ರಯತ್ನವಿಲ್ಲದೆ ಸುಲಭವಾಗಿ ದೊರಕುವ ಅನುಗ್ರಹವಾಯಿತು ! ಯಾವಾಗಲೂ ಎಲ್ಲೆಲ್ಲಿಯೂ ದೈನ್ಯದಿಂದ ತುಂಬಿರುವ ಮತ್ತು ಸುಖಹೀನವಾದ ಈ ಜೀವಲೋಕದಲ್ಲಿ ನನ್ನನ್ನು ನಿಂದಿಸುವುದರಿಂದ ಯಾವನಿಗಾ ದರೂ ಸಂತೋಷವುಂಟಾಗುವ ಹಾಗಿದ್ದರೆ (ಅವನು) ನನ್ನ ಮುಂದೆಯಾಗಲೀ, ನನ್ನ ಹಿಂದೆಯಾಗಲೀ ತನಗಿಷ್ಟ ಬಂದಂತೆ ನಿಂದಿಸಲಿ ! ಬಹು ದುಃಖದಿಂದ ಕೂಡಿರುವ ಈ ಜಗತ್ತಿನಲ್ಲಿ ಸಂತೋಷಲಾಭವು ಬಹು ಕಷ್ಟ.''

*(ಶ್ರೀವಿದ್ಯಾರಣ್ಯರ 'ಜೀವನ್ಮುಕ್ತಿವಿವೇಕ', ಪು.೧೬೨, ಮೈಸೂರು ಆಶ್ರಮ ಪ್ರಕಟಣೆ)*

### ನಿತ್ಯಸಿದ್ಧರು

ಶ್ರೀರಾಮಕೃಷ್ಣರು: ''ಸಾಧಾರಣ ಜನರು ಸಾಧನೆ ಮಾಡು ತ್ತಾರೆ, ಭಗವಂತನನ್ನು ಪ್ರೀತಿಸಿಯೂ ಪ್ರೀತಿಸುತ್ತಾರೆ. ಆದರೂ ಸಂಸಾರದಲ್ಲೂ ಆಸಕ್ತರಾಗುತ್ತಾರೆ. ಕಾಮಕಾಂಚನದಿಂದಲೂ ಮುಕ್ತರಾಗುತ್ತಾರೆ. ಅವರು ಸಾಮಾನ್ಯ ನೊಣದ ಹಾಗೆ. ಅದು ಹೂವಿನ ಮೇಲೂ ಕುಳಿತುಕೊಳ್ಳುತ್ತದೆ, ಸಿಹಿತಿಂಡಿಗಳ ಮೇಲೂ ಕುಳಿತುಕೊಳ್ಳುತ್ತದೆ. ಕೊನೆಗೆ ಹೇಸಿಗೆಯ ಮೇಲೂ ಕುಳಿತು ಕೊಳ್ಳುತ್ತದೆ. ಆದರೆ ನಿತ್ಯಸಿದ್ಧರು ಜೇನುನೊಣದ ಹಾಗೆ. ಅದು ಕೇವಲ ಹೂವಿನ ಮೇಲೆ ಕುಳಿತು ಮಧುಪಾನ ಮಾಡುತ್ತದೆ. ನಿತ್ಯಸಿದ್ಧ ಭಗವದ್ರೂಪವನ್ನು ಮಾತ್ರ ಪಾನಮಾಡುತ್ತಾನೆ. ಆತ ಎಂದಿಗೂ ವಿಷಯರಸದ ಕಡೆಗೆ ಹೋಗುವುದಿಲ್ಲ.''

*(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೧೬೧)*

ಶ್ರೀರಾಮಕೃಷ್ಣರ ಮೇಲಿನ ಮಾತು ಸಂಸ್ಕೃತದ ಪ್ರಸಿದ್ಧ ಹೇಳಿಕೆಯನ್ನು ನೆನಪಿಗೆ ತರುತ್ತದೆ: '**ಮಕ್ಷಿಕಾಃ ವ್ರಣಮಿಚ್ಛಂತಿ ಮಧು ಭುಂಕ್ತೇ ಚ ಷಟ್ಪದಃ ।**' – 'ನೊಣಕ್ಕೆ ವ್ರಣವೇ ಬೇಕು, ಮಧುಕರಕ್ಕೆ ಮಧುವೇ ಇಷ್ಟ.'

ಕಠೋಪನಿಷತ್ತಿನ ಒಂದು ಶ್ಲೋಕವನ್ನು ಪ್ರಸ್ತಾಪಿಸಬಹುದು:

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಃ**
**ತೌ ಸಂಪರೀತ್ಯ ವಿವಿನಕ್ತಿ ಧೀರಃ ।**
**ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ**
**ಪ್ರೇಯೋ ಮಂದೋ ಯೋಗಕ್ಷೇಮಾತ್ ವೃಣೀತೇ ॥**

*(ಕಠ, ೧.೨.೨)*

''ಶ್ರೇಯಸ್ಸು ಮತ್ತು ಪ್ರೇಯಸ್ಸು ಇವೆರಡೂ ಮನುಷ್ಯನ ಸಮೀಪಕ್ಕೆ ಬರುತ್ತವೆ. ಧೀಮಂತನು ಅವುಗಳನ್ನು ಚೆನ್ನಾಗಿ ಪರಿ ಶೀಲಿಸಿ ವಿವೇಚಿಸುತ್ತಾನೆ. ಧೀಮಂತನು ಪ್ರೇಯಸ್ಸಿಗಿಂತ ಶ್ರೇಯ ಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವಿವೇಕಿಯು ಯೋಗಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ.''

ಶ್ರೀರಾಮಕೃಷ್ಣರು ಮುಂದುವರಿಸುತ್ತಾರೆ: ''ನಿತ್ಯಸಿದ್ಧರ ಭಕ್ತಿ, ಸಾಧನೆ ಮಾಡಿದರೆ ಉಂಟಾಗುತ್ತದೆಯಲ್ಲ ಆ ತರಹದ್ದಲ್ಲ.

ಇಷ್ಟೊಂದು ಜಪ, ಇಷ್ಟೊಂದು ಧ್ಯಾನ ಮಾಡಬೇಕು ; ಈ ರೀತಿಯಾಗಿ ಪೂಜೆ ಮಾಡಬೇಕು – ಇವೆಲ್ಲ ವಿಧಿವತ್ ಭಕ್ತಿಗೆ ಸೇರಿವೆ. ಇದು ಗದ್ದೆಗೆ ಪೈರು ಹಾಕಿದ್ದರೆ ಅದನ್ನು ದಾಟಬೇಕಾದರೆ ತೆವರಿ ಮೇಲೆ ಸುತ್ತಿ ಸುತ್ತಿ ನಡೆದುಹೋಗಬೇಕಾಗುವ ಹಾಗೆ. ಅಥವಾ ಹತ್ತಿರವೇ ಇರುವ ಹಳ್ಳಿಯನ್ನು ದೋಣಿಯಲ್ಲಿ ಕುಳಿತು ಸೊಟ್ಟ ಸೊಟ್ಟವಾಗಿ ಸುತ್ತಿ ಹರಿಯುತ್ತಿರುವ ನದಿಯ ಮೂಲಕ ತಲುಪಬೇಕಾಗಿ ಬರುವ ಹಾಗೆ.'' *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೧೬೧)*

''ರಾಗಾಭಕ್ತಿ, ಪ್ರೇಮಭಕ್ತಿ : ಭಗವಂತ ತನ್ನವನೇ ಎಂಬ ಪ್ರೀತಿಯುಂಟಾಯಿತು ಎಂದರೆ, ಆಗ ವಿಧಿನಿಯಮಗಳಾವುವೂ ಬೇಕಾಗಿರುವುದಿಲ್ಲ. ಆಗ ಅದು ಕೊಯ್ಲಾದ ಗದ್ದೆಯ ಮೇಲೆ ಹಾದುಹೋದ ಹಾಗೆ. ತೆವರಿ ಮೇಲೆ ನಡೆದುಕೊಂಡು ಹೋಗಬೇಕಾಗಿರುವುದಿಲ್ಲ. ಯಾವ ದಿಕ್ಕಿಗೆ ಬೇಕಾದರೂ ನೇರವಾಗಿ ಹೋದರೆ ಆಯಿತು.

''ಪ್ರವಾಹ ಬಂತು ಎಂದರೆ ಮತ್ತೆ ಸೊಟ್ಟಸೊಟ್ಟವಾಗಿ ತಿರುಗಿಕೊಂಡು ಹರಿಯುತ್ತಿರುವ ನದಿಯ ಮೂಲಕ ಹಾದು ಹೋಗಬೇಕಾಗಿರುವುದಿಲ್ಲ. ಆಗ ಗದ್ದೆಗಳ ಮೇಲೆಲ್ಲ ಒಂದು ಜಲ್ಲೆ ಉದ್ದದ ನೀರು. ನೇರವಾಗಿ ದೋಣಿ ನಡೆಸಿಕೊಂಡು ಹೋಗಿ ಬಿಟ್ಟರೆ ಮುಗಿಯಿತು.'' *(ಅಲ್ಲೇ, ಪು.೧೬೨)*

ಸಾಮಾನ್ಯವಾದ ಉದಾಹರಣೆಗಳಿಂದ ಕೂಡಿದ ಶ್ರೀರಾಮಕೃಷ್ಣರ ಮೇಲಿನ ಸರಳ ನುಡಿಗಳು ಕೆಳಗಿನ ಶಾಸ್ತ್ರವಾಕ್ಯಗಳಿಗೆ ಅನುಗುಣವಾಗಿವೆ: *(ಗೀತೆ. ೨.೪೬)*

**ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ॥**
**ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥**

''ಎಲ್ಲ ಕಡೆಗಳಲ್ಲಿಯೂ ನೀರು ತುಂಬಿದ್ದರೆ (ಬಾವಿ, ಕೆರೆ, ಮುಂತಾದ) ಸಣ್ಣ ಜಲಾಶಯಗಳಿಂದ ಎಷ್ಟು ಪ್ರಯೋಜನವೋ (ತತ್ತ್ವವನ್ನು) ತಿಳಿದುಕೊಂಡಿರುವ ಬ್ರಾಹ್ಮಣನಿಗೆ ಎಲ್ಲ ವೇದಗಳಿಂದ ಅಷ್ಟೇ ಪ್ರಯೋಜನ.'' ಎಲ್ಲೆಲ್ಲಿಯೂ ನೀರು ತುಂಬಿಕೊಂಡಿರುವಾಗ ನಾವು ನೀರಿಗಾಗಿ ಕೆರೆ ಬಾವಿಗಳಿಗೆ ಹೋಗಬೇಕಾಗಿಲ್ಲ. ಅವೆಲ್ಲವೂ ಜಲಾವೃತ ಪ್ರದೇಶದೊಂದಿಗೆ ಒಂದಾಗಿ ಬಿಟ್ಟಿರುತ್ತವೆ. ಹಾಗೆಯೇ ಬ್ರಹ್ಮಜ್ಞಾನಿಗೆ ವೇದಾದಿ ಶಾಸ್ತ್ರಗಳಿಂದ ಯಾವ ಪ್ರಯೋಜನವೂ ಇಲ್ಲ. ಎಲ್ಲ ಶಾಸ್ತ್ರಜ್ಞಾನವೂ ಬ್ರಹ್ಮಜ್ಞಾನದೊಂದಿಗೆ ಪೂರ್ಣಗೊಂಡಿರುತ್ತವೆ. ಛಾಂದೋಗ್ಯ ಉಪನಿಷತ್ತಿನ ಒಂದು ಮಾತು: ''ಹೆಚ್ಚಿನ ಸಂಖ್ಯೆಯ ದಾಳದ ಭಾಗದಲ್ಲಿ ಕಡಮೆ ಸಂಖ್ಯೆಗಳು ಅಡಕವಾಗಿರುವಂತೆ ಆತ್ಯಂತಿಕ ಜ್ಞಾನವನ್ನು ಪಡೆದವನಿಗೆ ಎಲ್ಲ ಕಾಮನೆಗಳು ಪೂರ್ಣವಾದಂತೆ ಇರುತ್ತವೆ.'' *(೪.೧.೪)*

**ಸಂಪೂರ್ಣಂ ಜಗದೇವ ನಂದನವನಂ ಸರ್ವೇಽಪಿ ಕಲ್ಪದ್ರುಮಾಃ ।**
**ಗಾಂಗ್ಯಂ ವಾರಿ ಸಮಸ್ತವಾರಿನಿವಹಃ ಪುಣ್ಯಾಃ ಸಮಸ್ತಾಃ ಕ್ರಿಯಾಃ ॥**
**ವಾಚಃ ಪ್ರಾಕೃತಸಂಸ್ಕೃತಾಃ ಶ್ರುತಿರಹೋ ವಾರಾಣಸೀ ಮೇದಿನೀ ।**
**ಸರ್ವಾವಸ್ಥಿತಿರಸ್ಯ ವಸ್ತುವಿಷಯಾ ದೃಷ್ಟೇ ಪರೇ ಬ್ರಹ್ಮಣೇ ॥**

''ಪರಬ್ರಹ್ಮನನ್ನು ಅನುಭವಿಸಿದ ಮೇಲೆ ಅವನಿಗೆ (ಜ್ಞಾನಿಗೆ) ಇಡೀ ಜಗತ್ತೇ ನಂದನವನ, ಎಲ್ಲ ವೃಕ್ಷಗಳೂ ಕಲ್ಪವೃಕ್ಷವೇ, ಎಲ್ಲ ನೀರೂ ಗಂಗಾನೀರಿನಂತೆಯೇ, ಎಲ್ಲ ಕ್ರಿಯೆಗಳೂ ಪುಣ್ಯಪ್ರದವೇ. ಅದು ಪ್ರಾಕೃತವಾಗಲಿ, ಸಂಸ್ಕೃತವಾಗಲಿ ಎಲ್ಲ ಮಾತುಗಳು ಉಪನಿಷದ್ವಾಕ್ಯಗಳೇ, ಇಡೀ ಭೂಮಿಯೇ ವಾರಣಾಸಿ ಮತ್ತು ಎಲ್ಲ ಅನುಭವ ವಿಷಯಗಳೂ ಭಗವದ್ವಸ್ತುವೇ.''

## ಸಮಾಧಿಯ ಬಗ್ಗೆ

''ಸಮಾಧಿ ಅವಸ್ಥೆಯಲ್ಲಿ ಏನು ಬೋಧೆ ಆಗುತ್ತದೆ?'' ಪ್ರಶ್ನೆಗೆ ಉತ್ತರಿಸುತ್ತ ಹೀಗೆನ್ನುತ್ತಾರೆ ಶ್ರೀರಾಮಕೃಷ್ಣರು: ''ಕೀಟವು ಭ್ರಮರವನ್ನು ಕುರಿತು ಚಿಂತಿಸುತ್ತ ಕೊನೆಗೆ ಭ್ರಮರವೇ ಆಗಿ ಬಿಡುತ್ತದೆ ಎಂಬುದನ್ನು ನೀನು ಕೇಳಿರಬೇಕು. ನನಗೆ ಆಗ ಹೇಗನಿಸುತ್ತೆ ಗೊತ್ತೆ? ಪಾತ್ರೆಯಲ್ಲಿ ಇಟ್ಟ ಮೀನನ್ನು ಗಂಗೆಗೆ ಬಿಟ್ಟರೆ ಅದಕ್ಕೆ ಹೇಗೋ ಹಾಗೆ.'' ''ಆಗ 'ಅಹಂ' ಒಂದು ಕಿಂಚಿತ್ತೂ ಉಳಿದುಕೊಳ್ಳದೆ?'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರ ಉತ್ತರ: ''ಹೌದು, ನನ್ನಲ್ಲಿ ಪ್ರಾಯಿಕವಾಗಿ ಕಿಂಚಿತ್ 'ಅಹಂ' ಉಳಿದುಕೊಂಡಿರುತ್ತದೆ. ಚಿನ್ನದ ಗಟ್ಟಿಯನ್ನು ಒರೆಗಲ್ಲಿನ ಮೇಲೆ ಎಷ್ಟೇ ಉಜ್ಜಿದರೂ ಕೊನೆಗೆ ಒಂದು ಕಿಂಚಿತ್ ಭಾಗ ಕೈಯಲ್ಲಿ ಉಳಿದೇ ಉಳಿದುಕೊಳ್ಳುತ್ತದೆ. ಮತ್ತೆ ಉದಾಹರಣೆಗೆ ದೊಡ್ಡಬೆಂಕಿಯನ್ನು ತೆಗೆದುಕೋ. 'ಅಹಂ' ಎಂಬುದು ಅದರ ಒಂದು ಕಿಡಿ ಇದ್ದ ಹಾಗೆ. ಸಮಾಧಿಯಲ್ಲಿ ಬಾಹ್ಯಜ್ಞಾನ ಹೊರಟುಹೋಗುತ್ತದೆ. ಆದರೆ ಭಗವಂತ ಪ್ರಾಯಿಕವಾಗಿ ಕಿಂಚಿತ್ 'ಅಹಂ' ಉಳಿಸಿರುತ್ತಾನೆ – ವಿಲಾಸಕ್ಕೋಸ್ಕರ. 'ನಾನು' 'ನೀನು' ಎಂಬ ಭೇದಬುದ್ಧಿ ಉಳಿದರೆ ತಾನೆ ಆಸ್ವಾದನೆ ಸಾಧ್ಯ?

''ಕೆಲವು ವೇಳೆ ಭಗವಂತ ಆ ಕಿಂಚಿತ್ 'ಅಹಂ' ಅನ್ನೂ ನಿರ್ಮೂಲ ಮಾಡಿಬಿಡುತ್ತಾನೆ. ಆಗ ನಿರ್ವಿಕಲ್ಪ ಸಮಾಧಿ, ಜಡ ಸಮಾಧಿ ಉಂಟಾಗುತ್ತದೆ. ಆಗ ದೊರೆಯುವ ಅನುಭವವನ್ನು ಬಾಯಿಂದ ಹೇಳಲಾಗುವುದಿಲ್ಲ. ಒಂದು ಉಪ್ಪಿನ ಬೊಂಬೆ ಸಮುದ್ರದ ಆಳವನ್ನು ಕಂಡುಹಿಡಿಯಲು ಹೋಯಿತು. ಸ್ವಲ್ಪ ಇಳಿಯುವುದರೊಳಗೇ ಅದು ಕರಗಿಹೋಯಿತು. ಸಮುದ್ರದೊಡನೆ ಒಂದಾಗಿಬಿಟ್ಟಿತು. ಆಗ ಸಮುದ್ರದ ಹೊರಕ್ಕೆ ಬಂದು ಸಮುದ್ರ ಎಷ್ಟು ಆಳ ಎಂಬುದನ್ನು ತಿಳಿಸಲು ಯಾರು ತಾನೆ ಉಳಿದುಕೊಂಡಿರುತ್ತಾರೆ?'' *(ಶ್ರೀರಾಮಕೃಷ್ಣ ವಚನವೇದ, ಸಂ.೧, ಪು.೧೬೨)*

**(ಮುಂದುವರಿಯುವುದು)**